**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**Spl.C. 156/2021**

**P.W.-2**
**C.W.-3**

| | | |
|---|---|---|
| ಹೆಸರು | : | ದೇವೇಗೌಡ ಕೆ ಎಸ್ |
| ತಂದೆಯ ಹೆಸರು | : | ಶಿವನಂಜೇಗೌಡ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಕಿರಿಯ ತರಬೇತಿ ಅಧಿಕಾರಿ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ , ಬೆಳವಾಡಿ , ಮೈಸೂರು –18 |
| ವಾಸಸ್ಥಳ | : | ಮೈಸೂರು |

**ದಿನಾಂಕಃ 07.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

ನಾನು 2012 ರಿಂದ 2021 ರವರೆಗೂ ಮೈಸೂರಿನ ಎನ್ .ಆರ್. ಮೊಹಲ್ಲಾದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಕಿರಿಯ ತರಬೇತಿ ಅಧಿಕಾರಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿಃ 10.07.2019 ರಂದು ನಾನು ಎಂದಿನಂತೆ ಕರ್ತವ್ಯದ ಮೇಲಿದ್ದಾಗ ನನ್ನ ಮೇಲಾಧಿಕಾರಿಯವರು ಎಸಿಬಿ ಕಛೇರಿಗೆ ಹೋಗಿ ವರದಿ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ನನ್ನೊಂದಿಗೆ ನಮ್ಮ ಕಛೇರಿಯ ಇನ್ನೂಬ್ಬ ಅಧಿಕಾರಿ ವಸೀ ಅಹಮದ್ ಖಾನ್

ರವರಿಗೂ ಸಹ ಎಸಿಬಿ ಕಛೇರಿಗೆ ಹೋಗಿ ವರದಿ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ಅದರಂತೆ ನಾವಿಬ್ಬರು ಎಸಿಬಿ ಕಛೇರಿಗೆ ಮಧ್ಯಾಹ್ನ 01.00 ಗಂಟೆಗೆ ಹೋದೆವು. ಅಲ್ಲಿ ಇನ್ಸ್ ಪೆಕ್ಟರ್ ಶೇಖರ್ ರವರು ಇದ್ದರು. ಅವರಲ್ಲಿ ನಾವು ನಮ್ಮನ್ನು ಪರಿಚಯಿಸಿಕೊಂಡೆವು. ಅವರೂ ಸಹ ತಮ್ಮನ್ನು ಪರಿಚಯಿಸಿಕೊಂಡರು. ಇನ್ಸ್ ಪೆಕ್ಟರ್ ರವರ ಎದುರಿನಲ್ಲಿ ಬಸವರಾಜು ಎನ್ನುವವರು ಕುಳಿತಿದ್ದರು. ಅವರನ್ನು ನಮಗೆ ಪರಿಚಯಿಸಿದರು. ಬಸವರಾಜು ರವರು ಎಸಿಬಿ ಅಧಿಕಾರಿಗೆ ಒಂದು ಲಿಖಿತ ದೂರನ್ನು ನೀಡಿದ್ದರು. ಅದನ್ನು ನಮಗೆ ಓದಲು ನೀಡಿದರು. ನಾವಿಬ್ಬರು ಅದನ್ನು ಓದಿಕೊಂಡೆವು. ಆ ಲಿಖಿತ ದೂರಿನಲ್ಲಿ , ಬಸವರಾಜು ರವರು ಕೆ ಎಸ್ ಆರ್ ಟಿ ಸಿ ಯಲ್ಲಿ ಡ್ರೈವರ್ ಕಂ ಕಂಡಕ್ಟರ್ ಆಗಿದ್ದರು. ಅವರಿಗೆ 2011 ರಿಂದ 2019 ರವರೆಗು ಪ್ರತಿ ವರ್ಷದ Increment arrears ಬರಲು ಬಾಕಿ ಇತ್ತು. ಅದನ್ನು ಮಾಡಿಕೊಡಬೇಕೆಂದು ಸಂಬಂಧಪಟ್ಟ ಕಛೇರಿಯ ಲೆಕ್ಕ ಪತ್ರ ಮೇಲ್ವಿಚಾರಕರಾಗಿದ್ದ ಮಂಜುನಾಥ ರವರನ್ನು ಕೇಳಿಕೊಂಡಾಗ ಆತ ಅದನ್ನು ಮಾಡಿಕೊಡಲು ರೂ.10,000/- ಲಂಚ ಕೊಡಬೇಕೆಂದು ಕೇಳಿದ್ದರು. ಹೀಗಾಗಿ ದೂರುದಾರರು ಎಸಿಬಿ ಕಛೇರಿಗೆ ಸದರಿ ಮಂಜುನಾಥ ವಿರುದ್ಧ ದೂರನ್ನು ನೀಡಿದ್ದರು.

3. ಬಸವರಾಜು ರವರು ನಮ್ಮ ಸಮಕ್ಷಮ ತನಿಖಾಧಿಕಾರಿಯವರ ಮುಂದೆ 500 ರೂ ಮುಖ ಬೆಲೆಯ 20 ನೋಟುಗಳನ್ನು ಹಾಜರುಪಡಿಸಿದರು. ತನಿಖಾಧಿಕಾರಿಯವರು ವಸೀ ಅಹಮದ್ ಖಾನ್ ರವರನ್ನು ಪಂಚ ಸಾಕ್ಷಿ 1 ಎಂತಲು, ನನ್ನನ್ನು ಪಂಚ ಸಾಕ್ಷಿ 2 ಎಂತಲು ಹೆಸರಿಸಿದರು. ಅದಕ್ಕೆ ನಾವು ಒಪ್ಪಿದೆವು. ಸದರಿ ಹಣವನ್ನು ತನಿಖಾಧಿಕಾರಿಯವರು ವಸೀ ಅಹಮದ್ ಖಾನ್ ಅಂದರೆ ಚಾ,ಸಾ. 2 ರವರಿಗೆ ನೀಡಿದರು. ಅವರು ಆ ನೋಟುಗಳನ್ನು

ಎಣಿಸಿ , ಅವುಗಳ ಮೇಲಿದ್ದ ಸಂಖ್ಯೆಗಳನ್ನು ಓದಿ ಹೇಳಿದಂತೆ ನಾನು ಒಂದು ಪ್ರತ್ಯೇಕ ಹಾಳೆಯಲ್ಲಿ ಆ ನೋಟುಗಳ ಸಂಖ್ಯೆಗಳನ್ನು ಬರೆದುಕೊಂಡೆ. ಅದನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 2 ಎಂದು ಗುರುತುಪಡಿಸಿಕೂಳ್ಳಲಾಗಿದ್ದು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 2(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು. ಸದರಿ ಬಿಳಿಯ ಹಾಳೆಯ ಮೇಲೆ ಬರೆದುಕೊಂಡಿದ್ದನ್ನು ಚಾ,ಸಾ. 2 ರವರು ಇಟ್ಟುಕೊಂಡಿದ್ದರು. ನಂತರ ಆ ನೋಟುಗಳನ್ನು ಎಸಿಬಿ ಸಿಬ್ಬಂದಿಯವರು ಒಂದು ಬಿಳಿಯ ಹಾಳೆಯ ಮೇಲೆ ಹರಡಿ ಅವುಗಳ ಎರಡೂ ಬದಿಯಲ್ಲಿ ಪಿನಾಫ್ತಲೀನ್ ಪೌಡರ್ ನ್ನು ಲೇಪಿಸಿದರು. ನಂತರ ಅವುಗಳನ್ನು ಒಟ್ಟುಗೂಡಿಸಿ ಚಾ,ಸಾ. 2 ರವರ ಕೈಗೆ ನೀಡಿದರು. ನಂತರ ತನಿಖಾಧಿಕಾರಿಯವರ ಸೂಚನೆಯಂತೆ ಅವರು ಆ ನೋಟುಗಳನ್ನು ದೂರುದಾರರ ಶರ್ಟ ನ ಎಡ ಭಾಗದ ಜೇಬಿನಲ್ಲಿ ಇರಿಸಿದರು. ಮೊದಲು, ತನಿಖಾಧಿಕಾರಿಯವರು ದೂರುದಾರರ ಶರ್ಟ ನ ಜೇಬಿನಲ್ಲಿ ಬೇರೆ ಯಾವುದೇ ಹಣ, ವಸ್ತು ಇರುವುದಿಲ್ಲ ಎನ್ನುವುದನ್ನು ಖಾತ್ರಿ ಪಡಿಸಿಕೊಂಡಿದ್ದರು. ತನಿಖಾಧಿಕಾರಿಯವರು ದೂರುದಾರರಿಗೆ ಸದರಿ ಹಣವನ್ನು ಮುಟ್ಟುವುದು , ತೆಗೆಯುವುದು ಮಾಡಬಾರದು, ಮಂಜುನಾಥ ಹಣಕ್ಕೆ ಬೇಡಿಕೆ ಇಟ್ಟಾಗ ಮಾತ್ರವೇ ತೆಗೆದುಕೊಡಬೇಕು ಎಂದು ತಿಳಿಸಿದರು. ದೂರುದಾರರಿಂದ ಮಂಜುನಾಥ ಲಂಚದ ಹಣವನ್ನು ಪಡೆದ ನಂತರ ದೂರುದಾರರು ತಮ್ಮ ಬಲಗೈನಿಂದ ತಲೆಯ ಕೂದಲನ್ನು ಸವರಿಕೊಳ್ಳುವ ಮೂಲಕ , ಕಛೇರಿಯಿಂದ ಹೊರ ಬಂದು ಸೂಚನೆ ನೀಡಬೇಕು ಎಂದು ತಿಳಿಸಿದರು. ಅಲ್ಲಿ ಎಸಿಬಿ ಸಿಬ್ಬಂದಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿದರು. ನಂತರ ಚಾ,ಸಾ. 2 ರವರ ಎರಡೂ ಕೈಗಳ

ಬೆರಳುಗಳನ್ನು ಅದರಲ್ಲಿ ಅದ್ದಿಸಿದಾಗ ಆ ಧ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ನಂತರ ಆ ಧ್ರಾವಣವನ್ನು ಒಂದು ಪ್ರತ್ಯೇಕ ಬಾಟಲಿನಲ್ಲಿ ಶೇಖರಿಸಿ , ಮುಚ್ಚಳ ಮುಚ್ಚಿ, ಬಟ್ಟೆಯಿಂದ ಕಟ್ಟಿ ಮಾಹರು ಮಾಡಿ ನಮ್ಮಗಳ ಸಹಿ ಇರುವ ಚೀಟಿಯನ್ನು ಅದರ ಮೇಲೆ ಅಂಟಿಸಿದರು. ಸದರಿ ಬಾಟಲಿಯನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದರ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ಈಗಾಗಲೇ ಎಂ ಒ 1 ಎಂದು ಗುರುತುಪಡಿಸಿಕೊಳ್ಳಲಾಗಿರುತ್ತದೆ. ಆ ಪೇಪರ್ ಮೇಲೆ ಉಳಿದಿದ್ದ ಫಿನಾಫ್ತಲೀನ್ ಪೌಡರ್ ನ್ನು ಪ್ರತ್ಯೇಕವಾಗಿ ಪೊಟ್ಟಣ ಕಟ್ಟಿ ಮೊಹರು ಮಾಡಿ ಕಛೇರಿಯ ಅಲ್ಮೇರಾದಲ್ಲಿ ಇರಿಸಿದರು. (ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಸೀಲು ಮಾಡಿದ ಕವರ್ ತೆಗೆದು ಅದರ ಒಳಗೆ ಇದ್ದಂತಹ ಫಿನಾಪ್ತಲೀನ್ ಪೌಡರ್ ನ್ನು ಸಾಕ್ಷಿಗೆ ತೋರಿಸಲಾಗಿರುತ್ತದೆ) ಸದರಿ ಫಿನಾಪ್ತಲೀನ್ ಪೌಡರ್ ನ್ನು ಈಗ ನೋಡುತ್ತಿದ್ದೇನೆ. ಅದನ್ನು ಇರಿಸಲಾಗಿರುವ ಪ್ಯಾಕೆಟ್ ಮೇಲೆ ಇರುವ ಚೀಟಿಯಲ್ಲಿ ಇದ್ದ ಸಹಿಯನ್ನು ಸಾಕ್ಷಿ ತನ್ನದೆಂದು ಗುರುತಿಸಿರುತ್ತಾರೆ. ಸದರಿ ಫಿನಾಪ್ತಲೀನ್ ಪೌಡರ್ ಇರುವ ಪ್ಯಾಕೇಟ್ ನ್ನು ಈಗ ಎಂ ಒ 8 ಎಂದು ಗುರುತುಪಡಿಸಿಕೂಳ್ಳಲಾಯಿತು. ಫಿನಾಪ್ತಲೀನ್ ಡಬ್ಬಿಯನ್ನು ಪುನಃ ಕಛೇರಿಯ ಅಲ್ಮೇರಾದಲ್ಲಿ ಇಟ್ಟುಕೊಂಇರು.

4. ದೂರುದಾರರು ತಮ್ಮ ಮೊಬೈಲ್ ನ ಚಿಪ್ಪನ್ನು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದರು. ಅವರು ಅದನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ಅದರಲ್ಲಿದ್ದ ದೂರು ದಾರ ಮತ್ತು ಆರೋಪಿಯ ನಡುವಿನ ಸಂಭಾಷಣೆಯನ್ನು ನಮಗೆ ಕೇಳಿದರು ಮತ್ತು ಎರಡು ಸಿಡಿಗಳಿಗೆ ಆ ಸಂಭಾಷಣೆಯನ್ನು ವರ್ಗಾಯಿಸಿದರು. ನಂತರ ಸದರಿ ಸಂಭಾಷಣೆಯನ್ನು ಪ್ರತ್ಯೇಕವಾಗಿ ಬೆರಳಚ್ಚುಮಾಡಿಕೊಂಡರು. ಸದರಿ ಚಿಪ್ಪನ್ನು ಅಮಾನತ್ತು ಪಡಿಸಿಕೊಂಡರು.

ಅದನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಮೊಬೈಲ್ ಚೆಪ್ಪ ಇರುವ ಪ್ಯಾಕೆಟ್ ನ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ ಎಂದು ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಸರಿದ ಮೊಬೈಲ್ ಚೆಪ್ಪ ಇರುವ ಪ್ಯಾಕೆಟ್ ನ್ನು ಎಂ ಒ 3 ಎಂದು ಗುರುತುಪಡಿಸಿಕೊಳ್ಳಲಾಗಿದೆ.

5. ನಂತರ ಅಲ್ಲಿದ್ದ ನಾವೆಲ್ಲರು ಕೈಗಳನ್ನು ತೊಳೆದುಕೊಂಡೆವು.

6. ಮೇಲ್ಕಂಡ ಪ್ರಕ್ರಿಯಗಳು ನಡೆಯುತ್ತಿದ್ದ ಕಾಲಕ್ಕೆ ಫೋಟೋಗಳನ್ನು ತೆಗೆಯುತ್ತಿದ್ದರು. ಸದರಿ ಫೋಟೋಗಳನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ನಿಪಿ 3 ರಿಂದ 10 ಎಂದು ಗುರುತುಪಡಿಸಿಕೂಳ್ಳಲಾಗಿದೆ.

7. ಮೇಲ್ಕಂಡ ಪ್ರಕ್ರಿಯಗಳ ಬಾಬ್ತು ಮಹಜರ್ ಮಾಡಿ ನಮ್ಮಗಳ ಸಹಿಯನ್ನು ಪಡೆದರು. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 12 ಎಂದು ಗುರುತುಪಡಿಸಿಕೊಳ್ಳಲಾಗಿದ್ದು ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 12(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು.

8. ನಂತರ ಮಧ್ಯಾಹ್ನ 03.00 ಗಂಟೆಯ ಸಮಯದಲ್ಲಿ ಎರಡು ಇಲಾಖ ವಾಹನಗಳಲ್ಲಿ ಹೊರೆಟೆವು. ಒಂದು ಜೀಪಿನಲ್ಲಿ ನಾನು, ದೂರುದಾರರು ಮತ್ತು ಇನ್ಸ್ ಪೆಕ್ಟರ್ ಶೇಖರ್ ಇದ್ದರು. ಇನ್ನೂಂದು ವಾಹನದಲ್ಲಿ ಎಸಿಬಿ ಯ ಉಳಿದ ಸಿಬ್ಬಂದಿಗಳು ಮತ್ತು ಚಾ,ಸಾ. 2 ಇದ್ದರು. ವಾಹನಗಳನ್ನು ಮೈಸೂರು ಸಿಟಿ ಬಸ್ಸ ಸ್ಟಾಂಡ್ ನಿಂದ ಸ್ವಲ್ಪ ದೂರದಲ್ಲಿ ನಿಲ್ಲಿಸಲಾಯಿತು. ನಂತರ ನಾನು ಮತ್ತು ದೂರುದಾರರು ಬಸ್ಸ ಸ್ಟಾಂಡ್ ಕಡೆಗೆ ಹೋಗುತ್ತಿದ್ದೆವು. ಆಗ ದೂರುದಾರರು ಮಂಜುನಾಥನಿಗೆ ಫೋನ್ ಮಾಡಿ ಕೇಳಿದಾಗ ,

ನಾನು ರಾಮಸ್ವಾಮಿ ಸರ್ಕಲ್ ಬಳಿಯಲ್ಲಿ ಇರುತ್ತೇನೆ, ಅಲ್ಲಿಗೆ ಬಂದುಬಿಡು ಎಂದು ಹೇಳಿದರು. ಆಗ ದೂರುದಾರರು "ಆಯಿತು" ಎಂದರು. ಆದರೆ ದೂರುದಾರರು ಪುನಃ ಮಂಜುನಾಥನಿಗೆ ಕರೆ ಮಾಡಿ , ನಾನು ಸಿಟಿ ಬಸ್ಸ ಸ್ಟ್ಯಾಂಡ್ ಬಳಿಯಲ್ಲೇ ಕಾಯುತ್ತಿರುತ್ತೇನೆ, ನೀವು ಇಲ್ಲಿಗೆ ಬನ್ನಿ ಎಂದು ಹೇಳಿದರು. ಅದಕ್ಕೆ ಆತ ಒಪ್ಪಿದ. ಈ ಎಲ್ಲಾ ವಿಷಯಗಳನ್ನು ದೂರುದಾರರು ತನಿಖಾಧಿಕಾರಿಯವರಿಗೆ ತಿಳಿಸಿದರು. ಪುನಃ ಆರೋಪಿ ದೂರುದಾರರಿಗೆ ಪೋನ್ ಮಾಡಿ ಬನ್ನಿ ಮಂಟಪದ ಬಳಿ ಇರುವ ಕೆ ಎಸ್ ಆರ್ ಟ ಸಿ ಘಟಕ 2 ಕ್ಕೆ ಬಂದುಬಿಡು ಎಂದು ದೂರುದಾರರಿಗೆ ತಿಳಿಸಿದರು. ಇನ್ನು ಸಮಯ ಇದ್ದುದ್ದರಿಂದ, ತನಿಖಾಧಿಕಾರಿಯವರು ನಮ್ಮನ್ನು ವಾಪಾಸ್ಸು ಎಸಿಬಿ ಕಛೇರಿಗೆ ಕರೆದುಕೂಂಡು ಬಂದರು. ಪುನಃ 04.00 ಗಂಟೆಯ ಸಮಯಕ್ಕೆ ದೂರುದಾರರು ಫಿರ್ಯಾದುದಾರರಿಗೆ ಪೋನ್ ಮಾಡಿ ಬರಬೇಕು ಎಂದು ಹೇಳಿದ್ದರಿಂದ ಎಲ್ಲರು ಬನ್ನಿ ಮಂಟಪದ ಬಳಿ ಇರುವ ಕೆ ಎಸ್ ಆರ್ ಟಿ ಸಿ ಘಟಕ 2 ರ ಕಡೆಗೆ ಹೊರೆಟೆವು. ಆಗ ಆರೋಪಿ ಪುನಃ ದೂರುದಾರರಿಗೆ ಪೋನ್ ಮಾಡಿ ಇನ್ನೂಂದು ಅರ್ಧ ಗಂಟೆಯಲ್ಲಿ ಬರುತ್ತೇನೆ , ಅಲ್ಲಿರುವ ಭಾರ್ಗವ ಹೊಟೆಲ್ ನಲ್ಲಿ ಸಿಗು ಎಂದು ಹೇಳಿದರು. ಅದರಂತೆ ತನಿಖಾಧಿಕಾರಿಯವರು ನನ್ನನ್ನು ಮತ್ತು ದೂರುದಾರರನ್ನು ಆ ಹೊಟೆಲ್ ಬಳಿಗೆ ಕಳುಹಿಸಿದರು. ಸಂಜೆ ಸುಮಾರು 05.00 ಗಂಟೆ ಸಮಯಕ್ಕೆ ಮಂಜುನಾಥ ತಮ್ಮ ಬೈಕ್ ನಿಲ್ಲಿಸಿ ಬಾರ್ಗವ ಹೊಟೆಲ್ ಗೆ ಬಂದರು. ನಾನು ಮತ್ತು ದೂರುದಾರರು ಹೊಟೆಲ್ ಎದುರಿನಲ್ಲೇ ತನಿಖಾಧಿಕಾರಿ ಮತ್ತು ಪಂಚಾ ಸಾಕ್ಷಿ 1 ರವರಿಗೆ ಕಾಣುವಂತೆ ನಿಂತುಕೊಂಡಿದ್ದೆವು. ಆಗ ಬಸವರಾಜು ರವರು ಮಂಜುನಾಥನನ್ನು ಕರೆದುಕೂಂಡು ಎದುರುಗಡೆ ಇದ್ದ ಟೇಬಲ್ ಬಳಿ ಕರೆದುಕೊಂಡು ಹೋಗಿ ಕುಳಿತುಕೊಂಡರು. ನಾನು ಅವರಿಗೆ ಹತ್ತಿರವಿರುವ ಟೇಬಲ್ ನ

ಖರ್ಚಿಯಲ್ಲಿ ಕುಳಿತುಕೊಂಡೆ. ದೂರುದಾರರು ಅವರಿಬ್ಬರಿಗೂ ಟೀ ಆರ್ಡರ್ ಮಾಡಿದ್ದರು. ಅವರಿಬ್ಬರು ಮಾತನಾಡಿಕೊಳ್ಳುತ್ತಿದ್ದರು. ದೂರುದಾರರು ಬಿಳಿಯ ಹಳೆಯಲ್ಲಿ ಬರೆದಿದ್ದ ಒಂದು Requisition ನ್ನು ಮಂಜುನಾಥ ರವರಿಗೆ ಕೊಟ್ಟರು. ಮಂಜುನಾಥ ರವರು ಅದನ್ನು ತೆಗೆದುಕೊಂಡು ಟೇಬಲ್ ಮೇಲೆ ಇಟ್ಟುಕೊಂಡರು. ಮಂಜುನಾಥ ಕೈ ಸನ್ನೆಯ ಮೂಲಕ ದೂರುದಾರರಿಗೆ ಲಂಚದ ಹಣವನ್ನು ಕೇಳಿದರು. ಆಗ ದೂರುದಾರರು ತಮ್ಮ ಶರ್ಟ ನ ಜೇಬನಲ್ಲಿದ್ದ ಹಣವನ್ನು ತೆಗೆದು ಮಂಜುನಾಥನಿಗೆ ಕೊಟ್ಟಿರು. ನಂತರ ಆರೋಪಿ, ಬಸವರಾಜು ಕೊಟ್ಟಿದ್ದ ಆ ಬಳಿಯ Requisition ಪೇಪರ್ ನಲ್ಲೇ ಹಣವನ್ನು ಸುತ್ತಿಕೊಂಡು ತಮ್ಮ ಪ್ಯಾಂಟ್ ನ ಎಡ ಜೇಬಿನಲ್ಲಿ ಇಟ್ಟುಕೊಂಡರು. ನಂತರ ದೂರುದಾರರು ಅಲ್ಲಿಂದ ಎದ್ದು ಹೊರಕ್ಕೆ ಬಂದು ತನಿಖಾಧಿಕಾರಿಯವರಿಗೆ ತಮ್ಮ ಕೈನಿಂದ ತಲೆಯನ್ನು ಸವರಿಕೊಳ್ಳುವ ಮೂಲ ಸೂಚನೆ ನೀಡಿದರು. ನಂತರ ತನಿಖಾಧಿಕಾರಿಯವರು ಆರೋಪಿ ಇದ್ದ ಸ್ಥಳಕ್ಕೆ ಬಂದು ತಮ್ಮನ್ನು ಪರಿಚಯಿಸಿಕೊಂಡರು ದೂರುದಾರರು ತನಿಖಾಧಿಕಾರಿಯವರಿಗೆ ಆರೋಪಿಯನ್ನು ತೋರಿಸಿ ಈತನೇ ನನ್ನಿಂದ ಲಂಚದ ಹಣವನ್ನು ಪಡೆದುಕೊಂಡಿರುತ್ತಾರೆ ಎಂದು ತಿಳಿಸಿದರು. ಎಸಿಬಿ ಸಿಬ್ಬಂದಿ ಆರೋಪಿಯ ಎರಡೂ ಕೈಗಳನ್ನು ಪ್ರತ್ಯೇಕವಾಗಿ ಒಬ್ಬೊಬ್ಬರು ಹಿಡಿದುಕೊಂಡರು. ಆ ಹೊಟೆಲ್ ಚಿಕ್ಕದಿದ್ದುದ್ದರಿಂದ ಮತ್ತು ಉಳಿದ ಪ್ರಕ್ರಿಯಗಳನ್ನು ಮಾಡಲು ಅಲ್ಲಿ ಅನುಕೂಲತೆ ಇಲ್ಲದೇ ಇದ್ದುದ್ದರಿಂದ , ತನಿಖಾಧಿಕಾರಿಯವರು ಆ ಹೊಟೆಲ್ ಎನ ಎದುರುಗಡೆ ಇದ್ದಂಡಹ ಆರೋಪಿ ಕೆಲಸ ಮಾಡುತ್ತಿಲ್ಲ ಘಟಕಕ್ಕೆ ನನ್ನನ್ನು ಕರೆದುಕೊಂಡು ಹೋದರು. ಅದಕ್ಲೂ ಮುನ್ನ

ತನಿಖಾಧಿಕಾರಿಯವರು ನನ್ನಲ್ಲಿ ಆರೋಪಿ ದೂರುದಾರರಿಂದ ಹಅವನ್ನು ಪಡೆದುಕೊಂಡಿದ್ದನ್ನು ನೋಡಿದಿರಾ ಎಂದು ಕೇಳಿದ್ದರು. ನಾನು 'ಹೌದು ಎಂದಿದ್ದೆ.

9. ನಂತರ ಆ ಕಛೇರಿಯಲ್ಲಿ ಎಸಿಬಿ ಸಿಬ್ಬಂದಿ ಸೋಡಿಯಂ ಕಾರ್ಬೋನೇಟ್ ದ್ರಾವಣ ಪಡೆದುಕೊಂಡರು. ಆರೋಪಿಯ ಬಲ ಗೈಯನ್ನು ಮೊದಲು ಪ್ರತ್ಯೇಕವಾಗಿ ಅದ್ದಿಸಿದರು. ಆಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಇರುಗಿತು. ಅದನ್ನು ಒಂದು ಪ್ರತ್ಯೇಕ ಬಾಟಲನಲ್ಲಿ ಶೇಖರಿಸಿ , ಮುಚ್ಚಳ ಮುಚ್ಚಿ , ಬಟ್ಟೆಯಿಂದ ಕಟ್ಟಿ ಮಾಹರು ಮಾಡಿ ನಮ್ಮಗಳ ಸಹಿ ಇರುವ ಚೀಟಿಯನ್ನು ಅದರ ಮೇಲೆ ಅಂಟಿಸಿದರು. ಸದರಿ ಬಾಟಲಿಯನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದರ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ಈಗಾಗಲೇ ಎಂ ಒ 4 ಎಂದು ಗುರುತುಪಡಿಸಿಕೊಳ್ಳಲಾಗಿರುತ್ತದೆ.

10. ನಂತರ ಆರೋಪಿಯ ಎಡ ಗೈನ ಬೆರಳುಗಳನ್ನು ಪ್ರತ್ಯೇಕವಾಗಿ ಅದ್ದಿಸಿದರು. ಆಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಇರುಗಿತು. ಅದನ್ನು ಒಂದು ಪ್ರತ್ಯೇಕ ಬಾಟಲನಲ್ಲಿ ಶೇಖರಿಸಿ, ಮುಚ್ಚಳ ಮುಚ್ಚಿ , ಬಟ್ಟೆಯಿಂದ ಕಟ್ಟಿ ಮಾಹರು ಮಾಡಿ ನಮ್ಮಗಳ ಸಹಿ ಇರುವ ಚೀಟಿಯನ್ನು ಅದರ ಮೇಲೆ ಅಂಟಿಸಿದರು. ಸದರಿ ಬಾಟಲಿಯನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದರ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ಈಗಾಗಲೇ ಎಂ ಒ 5 ಎಂದು ಗುರುತುಪಡಿಸಿಕೊಳ್ಳಲಾಗಿರುತ್ತದೆ.

11. ತನಿಖಾಧಿಕಾರಿಯವರು ಕೇಳಿದಾಗ ಆರೋಪಿ ತನ್ನ ಪ್ಯಾಂಟ್ ನ ಜೇಬಿನಲ್ಲಿ ಇಟ್ಟುಕೊಂಡಿದ್ದ ಹಣವನ್ನು ಹಾಜರುಪಡಿಸಿದ. ಆ ಹಣವನ್ನು ಪುನಃ ನನಗೆ ನೀಡಿದರು. ನಾನು

ಅವುಗಳನ್ನು ಎಣಿಸಿ ಈಗಾಗಲೇ ಒಂದು ಪ್ರತ್ಯೇಕ ಹಾಳೆಯಲ್ಲಿ ಬರೆದುಕೊಂಡಿದ್ದ ಸಂಖ್ಯೆಗಳೊಂದಿಗೆ ಚಾ,ಸಾ. 2 ಮತ್ತು ನಾನು ಹೋಲಿಸಿ ನೋಡಿದಾಗ ಅವು ತಾಳೆಯಾದವು. ನಂತರ ಆ ಹಣವನ್ನು ತನಿಖಾಧಿಕಾರಿಯವರು ಅಮಾನತ್ತು ಪಡಿಸಿಕೂಂಡರು.

12. ದೂರುದಾರರಿಗೆ ತನಿಖಾಧಿಕಾರಿಯವರು ಒಂದು ಡಿಜಿಟಲ್ ವಾಯ್ಸು ರೆಕಾರ್ಡರ್ ನ್ನು ನೀಡಿದ್ದರು. ಅದನ್ನು ಕೇಳಿ ಪಡೆದುಕೊಂಡರು

13. ಆರೋಪಿಗೆ ಬದಲಿ ಪ್ಯಾಂಟ್ ನ ವ್ಯವಸ್ಥೆಯನ್ನು ಮಾಡಿ , ಆತ ಧರಿಸಿದ್ದ ಪ್ಯಾಂಟ್ ನ ಎಡ ಜೇಬಿನ ಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ ಆ ದ್ರಾವಣ ಯಾವ ಬಣ್ಣಕ್ಕೂ ತಿರುಗಲಿಲ್ಲ. ಅದನ್ನು ಪ್ರತೇಕ ಬಾಟಲಿನಲ್ಲಿ ಹಾಕಿ ಮುಚ್ಚಳ ಮುಚ್ಚಿ , ಬಟ್ಟೆಯಿಂದ ಕಟ್ಟಿ ಮಾಹರು ಮಾಡಿ ನಮ್ಮಗಳ ಸಹಿ ಇರುವ ಚೀಟಿಯನ್ನು ಅದರ ಮೇಲೆ ಅಂಟಿಸಿದರು. ಸದರಿ ಬಾಟಲಿಯನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದರ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ಈಗಾಗಲೇ ಎಂ ಒ 7 ಎಂದು ಗುರುತುಪಡಿಸಿಕೊಳ್ಳಲಾಯಿತು.

14. ನಂತರ ಆರೋಪಿ ಆ ಬಿಳಿಯ ಹಾಳೆ ಒಳಗೆ ಇರಿಸಿಕೂಂಡಿದ್ದ ಹಣದ ಬಾಬ್ತು , ಆ ಬಿಳಿಯ ಹಾಳೆಯನ್ನು ಹತ್ತಿಯಿಂದ ಒರೆಸಿ ಅದನ್ನು ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಪ್ರತ್ಯೇಕ ಬಾಟಲಿನಲ್ಲಿ ಶೇಖರಿಸಿ ಮುಚ್ಚಳ ಮುಚ್ಚಿ, ಬಟ್ಟೆಯಿಂದ ಕಟ್ಟಿ ಮಾಹರು ಮಾಡಿ ನಮ್ಮಗಳ ಸಹಿ ಇರುವ ಚೀಟಿಯನ್ನು ಅದರ ಮೇಲೆ ಅಂಟಿಸಿದರು. ಸದರಿ ಬಾಟಲಿಯನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದರ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ಈಗ ಎಂ

ಒ 9 ಎಂದು ಗುರುತುಪಡಿಸಿಕೊಳ್ಳಲಾಯಿತು. ಮೊಹರು ಮಾಡಿರುವ ಪ್ಯಾಕೆಟ್ ನಿಂದ ಹತ್ತಿಯನ್ನು ತೆಗೆದು ಸಾಕ್ಷಿಗೆ ತೋರಿಸಲಾಯಿತು. ಅದನ್ನು ಎಂ ಒ 10 ಎಂದು ಗುರುತುಪಡಿಸಿಕೊಳ್ಳಲಾಯಿತು. ಅದರ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ.

15. ಆರೋಪಿ ಹಣವನ್ನು ಸುತ್ತಿಕೊಂಡಿದ್ದ ಬಿಳಿಯ ಹಾಳೆಯನ್ನು ಸಹ ಅಮಾನತ್ತು ಪಡಿಸಿಕೊಂಡರು. (ಈಗ ಮೊಹರು ಮಾಡಿದ ಪ್ಯಾಕೆಟ್ ನಿಂದ ಆ ಬಿಳಿಯ ಹಾಳೆಯನ್ನು ತೆಗೆದು ಸಾಕ್ಷಿಗೆ ತೋರಿಸಲಾಯಿತು) ಅದನ್ನು ಈಗ ಎಂ ಒ 11 ಎಂದು ಗುರುತುಪಡಿಸಿಕೊಳ್ಳಲಾಯಿತು. ಅದರ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ.

16. ಆರೋಪಿ ಧರಿಸಿದ್ದ ಪ್ಯಾಂಟ್ ನ್ನು ಅಮಾನತ್ತು ಪಡಿಸಿಕೊಂಡರು. ಸದರಿ ಪ್ಯಾಂಟ್ ನ್ನು ಇಂದು ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಈಗ ಎಂ ಒ 12 ಎಂದು ಗುರುತುಪಡಿಸಿಕೂಳ್ಳಲಾಯಿತು. (ಈಗ ಮೊಹರು ಮಾಡಿದ ಪ್ಯಾಕೆಟ್ ನಿಂದ ಪ್ಯಾಂಟನ್ನು ಹೊರ ತೆಗೆದು ಸಾಕ್ಷಿಗೆ ತೋರಿಸಲಾಯಿತು).

17. ನಂತರ ದೂರುದಾರರು ನೀಡಿದ ವಾಯ್ಸ್ ರೆಕಾರ್ಡರ್ ನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ಅದರಲ್ಲಿದ್ದ ಸಂಭಾಷಣೆಯನ್ನು ಎರಡು ಸಿಡಿಗಳಿಗೆ ವರ್ಗಾಯಿಸಿದರು, ಮತ್ತು ಅದರಲ್ಲಿದ್ದ ಸಂಭಾಷಣೆಯನ್ನು ಲ್ಯಾಪ್ ಟಾಪ್ ನಲ್ಲೇ ಬೆರಳಚ್ಚು ಮಾಡಿಕೊಂಡರು. ನಂತರ ಆರೋಪಿ ಮತ್ತು ಸಂಭಾಷಣೆಯನ್ನು ಎದುರು ಬದರು ಕೂರಿಸಿ ಅವರಿಂದ ಅದೇ ಸಂಭಾಷಣೆಯನ್ನು ಓದಿಸಿ ಮಾದರಿ ಧ್ವನೀಯನ್ನು ಪಡೆದುಕೊಂಡರು.

18. ತನಿಖಾಧಿಕಾರಿಯವರು ಆ ಘಟಕದಲ್ಲಿದ್ದ ವ್ಯವಸ್ಥಾಪಕರನ್ನು ಕರೆದು ಹಾಜರಾತಿ ಪುಸ್ತಕದ ನಕಲು ಮತ್ತು ಆರೋಪಿಗೆ ಕೊಡಬೇಕಾಗಿದ್ದ ಚೆಕ್ಕನ್ನು ಅಮಾನತ್ತು ಪಡಿಸಿಕೂಂಡರು.

19. ಆರೋಪಿಯನ್ನು ಸಮಜಾಯಿಶಿಯ ಬಗ್ಗೆ ಕೇಳಿದಾಗ ಆತ ಲಿಖಿತ ಸಮಜಾಯಿಶಿಯನ್ನು ನೀಡಿ ಅದರಲ್ಲಿ , ತಾನು ಲಂಚದ ಹಣಕ್ಕಾಗಿ ದೂರುದಾರರಲ್ಲಿ ಬೇಡಿಕೆ ಇಟ್ಟಿರಲಿಲ್ಲ ಮತ್ತು ಪಡೆದಿರುವುದಿಲ್ಲ, ನನ್ನನ್ನು ಸುಮ್ಮನೆ ಈ ಪ್ರಕರಣದಲ್ಲಿ ಸಿಲುಕಿಸುವ ಸಲುವಾಗಿ ಈ ರೀತಿ ಮಾಡಿರುತ್ತಾರೆ ಎಂದು ಕೊಟ್ಟರು.

20. ಮೇಲ್ಕಂಡ ಪ್ರಕ್ರಿಯಗಳು ನಡೆಯುತ್ತಿದ ಸಂಧರ್ಬದಲ್ಲಿ ಕಾಲ ಕಾಲಕ್ಕೆ ಪೋಟೋಗಳನ್ನು ತೆಗೆಯುತ್ತಿದ್ದರು. ಸದರಿ ಪೋಟೋಗಳನ್ನು ಈಗ ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ನಿಪಿ 15 ರಿಂದ 23 ಎಂದು ಗುರುತುಪಡಿಸಿಕೂಳ್ಳಲಾಗಿದೆ.

21. ಮೇಲ್ಕಂಡ ಪ್ರಕ್ರಿಯಗಳ ಬಾಬ್ತು ಮಹಜರ್ ಮಾಡಿ ನಮ್ಮ ಸಹಿಯನ್ನು ಪಡೆದರು. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 24 ಎಂದು ಗುರುತುಪಡಿಸಿಕೊಳ್ಳಲಾಗಿದ್ದು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 24(ಬಿ) ಎಂದು ಗುರುತುಪಡಿಸಿಕೂಳ್ಳಲಾಯಿತು.

22. ಆ ದಿನ ನೋಡಿದ ಆರೋಪಿ ಮಂಜುನಾಥ ಇಂದು ನ್ಯಾಯಾಲಯದ ಮುಂದಿದ್ದಾರೆ. ಅವರನ್ನು ನೋಡಿ ಗುರುತಿಸುತ್ತೇನೆ.

23. ತನಿಖಾಧಿಕಾರಿಯ ಮುಂದೆ ನಾನು ನನ್ನ ಹೇಳಿಕೆ ನೀಡಿರುತ್ತೇನೆ.

24. 20 ನೇ ತಾರೀಖಿನಂದು ಪುನಃ ತನಿಖಾಧಿಕಾರಿ ನನ್ನನ್ನು ಕರೆಯಿಸಿದ್ದರು. ಭಾರ್ಗವ ಹೊಟೆಲ್ ಗೆ ಕರೆದಿದ್ದರು. ಅಲ್ಲಿಗೆ ಎಂಜಿನಿಯರ್ ಬಂದಿದ್ದರು. ಅವರಿಗೆ ನಾನು ಜಾಗವನ್ನು ತೋರಿಸಿದೆ.

**Spl.C.No.156/2021**
**P.W.-2**
**C.W.-3**

25. ಆರೋಪಿಯಿಂದ ವಶ ಪಡಿಸಿಕೊಂಡ ಹಣವನ್ನು ನೋಡಿದರೆ ಗುರುತಿಸುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.